154ಪ್ರಶ್ನೆ ದಿ=72= (61) 4RR 03D3

# ಕರ್ನಾಟಕ ವಿಧಾನ ಪರಿಷತ್ತು

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಪ್ರತಾಪ್ ಸಿಂಹ ನಾಯಕ್. ಕೆ ಇವರು ನಿಯಮ 72 ರಡಿ ಮಂಡಿಸಿರುವ ಸೂಚನೆಗೆ ಉತ್ತರ.**

**ನಿಯಮ 72 :**

ರಾಜ್ಯದಲ್ಲಿ ಕಳೆದ ಕೆಲವು ತಿಂಗಳುಗಳಿಂದ ಇ-ಖಾತಾ ಸಮಸ್ಯೆಯು ಜನಸಾಮಾನ್ಯರನ್ನು ನಿರಂತರವಾಗಿ ಸಂಕಷ್ಟಕ್ಕೆ ದೂಡುವುದರ ಜೊತೆಗೆ ರಾಜಸ್ವ ಸಂಗ್ರಹಕ್ಕೂ ತೊಂದರೆಯನ್ನು ಉಂಟುಮಾಡಿದೆ. ಇ-ಖಾತಾ ವಿತರಣೆ ಪ್ರಕ್ರಿಯೆ ಸುಗಮಗೊಳಿಸಲು, ಈಗಿರುವ ಅಡತಡೆಗಳನ್ನು ನಿವಾರಿಸಲು ಹಾಗು ಭವಿಷ್ಯದಲ್ಲಿ ಎದುರಾಗಬಹುದಾದ ಸಮಸ್ಯೆಗಳಿಗೆ ಶಾಶ್ವತ ಪರಿಹಾರ ಕಂಡುಹಿಡಿಯಲು ಇದುವರೆಗೆ ಯಾವುದೇ ಸೂಕ್ತ ಕ್ರಮಗಳನ್ನು ಕೈಗೊಂಡಿರುವುದಿಲ್ಲ.

ಇ-ಖಾತಾ ವಿತರಣೆಗೆ ಪ್ರಕ್ರಿಯೆಗೆ ಅಡ್ಡಿಯಾಗಿರುವ ವಿವಿಧ ರೀತಿಯ ಸಮಸ್ಯೆಗಳನ್ನು ಸಂಪೂರ್ಣವಾಗಿ ಪರಿಹರಿಸುವುದರ ಜೊತೆಗೆ ಸದರಿ ಪ್ರಕ್ರಿಯೆಯನ್ನು ಸರಳಗೊಳಿಸಲು ಅಗತ್ಯ ಕ್ರಮ ವಹಿಸದೇ ಇರುವುದರಿಂದ ಉಂಟಾಗಿರುವ ಗಂಭೀರ ಸಮಸ್ಯೆ ಕುರಿತು.

**ಉತ್ತರ:**

ಪೌರಾಡಳಿತ ನಿರ್ದೇಶನಾಲಯದ ಸುತ್ತೋಲೆ ದಿ:20-04-2016 ರಲ್ಲಿ ಕೈಬರಹದ ನಮೂನೆ-3 ನೀಡುವುದನ್ನು ದಿನಾಂಕ:02-05-2016 ರಿಂದ ಜಾರಿಗೆ ಬರುವಂತೆ ನಿಷೇಧಿಸಿ, ಇ-ಆಸ್ತಿ ತಂತ್ರಾಂಶದ ಮೂಲಕ ನಮೂನೆ -3 ಸೃಜಿಸಿ ನೀಡಲು ರಾಜ್ಯದ ಎಲ್ಲಾ ನಗರ ಸ್ಥಳೀಯ ಸಂಸ್ಥೆಗಳಿಗೆ ಸೂಚಿಸಲಾಗಿರುತ್ತದೆ. ಸದರಿ ಸುತ್ತೋಲೆಯಲ್ಲಿ ಇ-ಆಸ್ತಿ ತಂತ್ರಾಂಶದಲ್ಲಿ ನಮೂನೆ-3 ಸೃಜಿಸಲು ಪಡೆಯಬೇಕಾದ ದಾಖಲೆಗಳ ವಿವರಗಳನ್ನು ವಿವರಿಸಲಾಗಿದೆ. ಸ್ವತ್ತಿನ ಮಾಲೀಕರು ಅಗತ್ಯ ದಾಖಲೆಗಳನ್ನು ಆನ್‌ಲೈನ್ ಮೂಲಕ ಸಲ್ಲಿಸಿ, 07 ದಿನಗಳ ಒಳಗಾಗಿ ನಮೂನೆ-3 ಪ್ರತಿ ಪಡೆಯಬಹುದಾಗಿರುತ್ತದೆ.

ತಂತ್ರಾಂಶದಲ್ಲಿ ಬರುವಂತಹ ತಾಂತ್ರಿಕ ಸಮಸ್ಯೆಗಳನ್ನು ತ್ವರಿತವಾಗಿ ಬಗೆಹರಿಸಲಾಗುತ್ತಿದೆ ಹಾಗೂ ಪೌರಾಡಳಿತ ನಿರ್ದೇಶನಾಲಯದ ಸುತ್ತೋಲೆ ದಿನಾಂಕ:01-08-2023 ರಲ್ಲಿ ಇ-ಆಸ್ತಿ ತಂತ್ರಾಂಶವನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವ ಹಾಗೂ ಸಾರ್ವಜನಿಕರಿಗೆ ತ್ವರಿತವಾಗಿ ಸೇವೆಯನ್ನು ಒದಗಿಸುವ ಉದ್ದೇಶದಿಂದ ಕಾರ್ಯವಿಧಾನವನ್ನು ಸರಳೀಕರಣಗೊಳಿಸಲಾಗಿರುತ್ತದೆ.

ನಗರಸಭೆ, ಪುರಸಭೆ ಮತ್ತು ಪಟ್ಟಣ ಪಂಚಾಯಿತಿಗಳಿಗೆ ಇ-ಆಸ್ತಿ ತಂತ್ರಾಂಶದಲ್ಲಿ ಏಕರೂಪ ಕಾರ್ಯ ಹರಿವನ್ನು (workflow) ಅಳವಡಿಸಲಾಗಿದೆ ಹಾಗೂ ಅರ್ಜಿಗಳ ನಿರ್ವಹಣೆಯನ್ನು ವಿಲೇ ಮಾಡಲು ಅಧಿಕಾರಿ / ಸಿಬ್ಬಂದಿಗಳಿಗೆ ಕಾಲಾವಧಿಯನ್ನು ನಿಗಧಿಪಡಿಸಲಾಗಿದ್ದು, ಸದರಿ ಅವಧಿಯಲ್ಲಿ ವಿಲೇ ಮಾಡದಿದ್ದಲ್ಲಿ ತಂತ್ರಾಂಶದಲ್ಲಿ ಸ್ವಯಂಚಾಲಿತವಾಗಿ ಅರ್ಜಿಯು ರವಾನೆಯಾಗುವಂತೆ ಮಾಡಲಾಗಿದೆ. ಅಧಿಕಾರಿ/ ಸಿಬ್ಬಂದಿಗಳು

ತಂತ್ರಾಂಶದಲ್ಲಿ ಅರ್ಜಿಗಳನ್ನು First in First Out (FIFO) ಮಾದರಿಯಲ್ಲಿ ವಿಲೇ ಮಾಡುವಂತೆ ತಂತ್ರಾಂಶ ಸಿದ್ಧಪಡಿಸಲಾಗಿದೆ.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಏಕ ಕಾಲದಲ್ಲಿ ಇ-ತಂತ್ರಾಂಶವನ್ನು ಜಾರಿಗೊಳಿಸುವ ಉದ್ದೇಶದಿಂದ ಪಾಲಿಕೆಯ ಉಪ ವಿಭಾಗ ಕಛೇರಿಗಳಲ್ಲಿ ನಿರ್ವಹಿಸಲಾಗುತ್ತಿದ್ದ ಎಲ್ಲಾ ಆಸ್ತಿ ತೆರಿಗೆ ವಹಿಗಳನ್ನು ಸ್ಕ್ಯಾನಿಂಗ್ ಮಾಡಿ ಡಿಜಿಟಲೀಕರಣಗೊಳಿಸಲಾಗಿದ್ದು, ಈ ರೀತಿ ಡಿಜಿಟಲೀಕರಣಗೊಳಿಸಲಾದ ಸ್ವತ್ತುಗಳಿಗೆ ಕರಡು ಇ-ಖಾತಾ ಪಡೆಯಲು ಅವಕಾಶ ಕಲ್ಪಿಸಿ, ಅಂತಿಮ ಇ-ಖಾತಾ ಪಡೆಯಲು ತಂತ್ರಾಂಶವನ್ನು ಅಭಿವೃದ್ಧಿಪಡಿಸಲಾಗಿರುತ್ತದೆ.

ಪ್ರಸ್ತುತ ಸುಮಾರು 24,60,052 ಕರಡು ಇ-ಖಾತಾಗಳನ್ನು ಆನ್ ಲೈನ್‌ನಲ್ಲಿ ಸಿದ್ಧಪಡಿಸಲಾಗಿದ್ದು, ಪಾಲಿಕೆಯ ಜಾಲತಾಣ https://bbmpeaasthi.karnataka.gov.in/ ನಲ್ಲಿ ನಾಗರೀಕರೇ ಕರಡು ಇ-ಖಾತಾಗಳನ್ನು ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿರುತ್ತದೆ. ನಾಗರೀಕರುಗಳು ಅವರ ಆಧಾರ್ ಸಂಖ್ಯೆ, ಕ್ರಯಪತ್ರದ ಸಂಖ್ಯೆ, ಆಸ್ತಿ ತೆರಿಗೆ ಅರ್ಜಿ ಸಂಖ್ಯೆ, ಸ್ವತ್ತಿನ ಛಾಯಾಚಿತ್ರ, ವಿದ್ಯುತ್ ಸಂಪರ್ಕ ಖಾತೆ ನೀಡಿ ನಾಗರೀಕರೇ ಅಂತಿಮ ಇ-ಖಾತಾಗಳನ್ನು ಪಡೆದುಕೊಳ್ಳಬಹುದಾಗಿರುತ್ತದೆ.

ಯಾವುದಾದರೂ ದಾಖಲೆಗಳು ತಾಳೆಯಾಗದೇ ಇದ್ದಲ್ಲಿ ಅಂತಹ ಸಂದರ್ಭದಲ್ಲಿ ಮಾತ್ರ ಇ-ಖಾತಾ ಅನುಮೋದಿಸಲು ಸಂಬಂಧಪಟ್ಟ ಸಹಾಯಕ ಕಂದಾಯ ಅಧಿಕಾರಿಗಳಿಗೆ ಆನ್‌ಲೈನ್ ಮೂಲಕವೇ ರವಾನೆಯಾಗಲಿದ್ದು, ಅಂತಹ ಅರ್ಜಿಗಳನ್ನು ಸಹಾಯಕ ಕಂದಾಯ ಅಧಿಕಾರಿಗಳು ಪರಿಶೀಲಿಸಿ ಅನುಮೋದನೆ ನೀಡುತ್ತಿರುತ್ತಾರೆ. ಸದರಿ ಅರ್ಜಿಯು ಅನುಮೋದನೆಗೊಂಡ ನಂತರ ನಾಗರೀಕರೇ ಅಂತಿಮ ಇ-ಖಾತಾವನ್ನು ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿರುತ್ತದೆ.

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ನಿರ್ಮಿಸಿರುವ ಬಡಾವಣೆಗಳಲ್ಲಿನ ನಿವೇಶನಗಳು, ಪ್ರಾಧಿಕಾರದಿಂದ ಅನುಮೋದನೆಗೊಂಡಿರುವ ಖಾಸಗಿ ಬಡಾವಣೆಯಲ್ಲಿನ ನಿವೇಶನಗಳು, ಪ್ರಾಧಿಕಾರವು ಅನುಮೋದಿಸಿರುವ ವಸತಿ ಮತ್ತು ವಸತಿಯೇತರ ಅಭಿವೃದ್ಧಿ ಯೋಜನೆ ನಕ್ಷೆಯಲ್ಲಿ ಒಳಗೊಂಡ ಸ್ವತ್ತುಗಳು, ಫ್ಲ್ಯಾಟ್ ಗಳು ಇವುಗಳಿಗೆ ಇ-ಖಾತಾವನ್ನು ಕರ್ನಾಟಕ ಸರ್ಕಾರದ ವಿದ್ಯುನ್ಮಾನ ನಾಗರಿಕ ಸೇವಾ ವಿತರಣಾ ನಿರ್ದೇಶನಾಲಯವು [Directorate of Electronic Delivery of Citizen Services (EDCS)] ಒದಗಿಸಿರುವ ತಂತ್ರಾಂಶದ ಮೂಲಕ ನೀಡಲಾಗುತ್ತಿದೆ.

**ಸಂಖ್ಯೆ: ನಅಇ 41 ಸಮನ್ವಯ 2024.**

**(ರಹೀಂ ಖಾನ್)**
**ಪೌರಾಡಳಿತ ಮತ್ತು ಹಜ್ ಸಚಿವರು**